# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕಾರ್ಯಪಾಲಕ ಅಭಿಯಂತರರು(ವಿ) ಕಛೇರಿ, ಮಹದೇವಪುರ ವಲಯ, ಬೆಂಗಳೂರು.

---

**ದಿನಾಂಕ: 18-12-2020ರಂದು ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೆ.ಆರ್.ಪುರ ಬಿಬಿಎಂಪಿ ಕಛೇರಿ, ವಿದ್ಯುತ್ ವಿಭಾಗ, ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು:-**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಶರತ್ ಕುಮಾರ್ – ನೋಡಲ್ ಅಧಿಕಾರಿಗಳು, ವಾರ್ಡ್ ಸಂ– 52
2. ಶ್ರೀ.ಜಗದೀಶ್.ಎಂ – ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಂ–52
3. ಶ್ರೀ.ಕೆ.ಆರ್.ಸತೀಶ್–ಸಹಾಯಕ ಕಂದಾಯ ಅಧಿಕಾರಿ, ಕೆ.ಆರ್.ಪುರ
4. ಶ್ರೀ.ಮಹಾಂತೇಶಗೌಡ– ಪಶುಸಂಗೋಪನೆ ವೈದ್ಯಾಧಿಕಾರಿ
5. ಶ್ರೀ.ವಿ.ಓಬಳೇಶ್– ಕಂದಾಯ ಪರಿವೀಕ್ಷಕರು, ವಾರ್ಡ್ ಸಂ–52
6. ಶ್ರೀ.ಮಂಜುನಾಥ.ಸಿ.– ದ್ವಿತೀಯ ದರ್ಜೆ ಸಹಾಯಕರು, ವಾರ್ಡ್ ಸಂ– 52
7. ಶ್ರೀ.ಸೈಯದ್ ನಿಸಮುದೀನ್ PSI (Traffic)
8. ಶ್ರೀ.ರಾಘವೇಂದ್ರ, ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ಸಂ.52 ಕೆ.ಆರ್.ಪುರ

*****

ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಂ:52 ಸಭೆಗೆ ಎಲ್ಲಾರನ್ನು ಅಹ್ವಾನಿಸುತ್ತಾ, ಸಭೆಯ ವಿವರಗಳನ್ನು ನೀಡುವಂತೆ ಸೂಚಿಸಿದರು. ವಾರ್ಡ್ ಸಂ:52ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ಸಾರ್ವಜನಿಕರಿಂದ ಬಂದಂತಹ ಮನವಿಗಳು ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವ ಕೆಲಸಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ, ಬೆಂಗಳೂರು ಜಲ ಮಂಡಳಿ ಇಲಾಖೆ, ಕಾಮಗಾರಿ ಇಲಾಖೆ ಮತ್ತು ಬೆ.ವಿ.ಕಾಂ ಇಲಾಖೆ ಇತರೆ ವಿಷಯಗಳನ್ನು ಈ ಕೆಳಕಂಡಂತೆ ಚರ್ಚಿಸಲಾಗಿರುತ್ತದೆ.

- ಸಭೆಯ ವಾರ್ಡ್‌ನಲ್ಲಿ ಅವಶ್ಯಕವಿರುವ ಸ್ಥಳಗಳಲ್ಲಿ, ಸ್ಥಳ ಲಭ್ಯವಿದ್ದಲ್ಲಿ ಶೌಚಾಲಯ ಸ್ಥಾಪಿಸಲು ಸ್ಥಳಗಳನ್ನು ಗುರುತಿಸಲು ಕೋರಲಾಯಿತು.
- ಸಭೆಯಲ್ಲಿ ವಾರ್ಡ್ ರಸ್ತೆಗಳಲ್ಲಿ ಹಾಳಾಗಿರುವ/ಹೊಸದಾಗಿ ನಿರ್ಮಿಸಬೇಕಾಗಿರುವ ಪಾದಚಾರಿ ರಸ್ತೆಗಳ ಬಗ್ಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಕೋರಲಾಯಿತು.
- ಹಿಂದಿನ ಸಭೆಯಲ್ಲಿ ತಿಳಿಸಿರುವ ಟಿ.ಸಿ.ಪಾಳ್ಯ ರಾಷ್ಟೀಯ ಹೆದ್ದಾರಿಯ ಸರ್ವಿಸ್ ರಸ್ತೆ ಬೀದಿ ದೀಪಗಳನ್ನು ಸರಿಪಡಿಸಲಾಗಿರುತ್ತದೆ.
- ಪಶುಸಂಗೋಪನೆ ವೈದ್ಯಾಧಿಕಾರಿ ಇಲಾಖೆಯ ಅಧಿಕಾರಿಯವರು ಬೀದಿ ನಾಯಿಗಳ ABC ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿರುವ ಬಗ್ಗೆ ವಿವರಿಸಿದರು ಹಾಗೂ ಕೋಳಿ ಮಾಂಸದ ಅಂಗಡಿಗಳಿಗೆ ಎಚ್ಚರಿಕೆ ನೀಡುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಕಸ ನಿರ್ವಹಣೆಯು ನಿರೀಕ್ಷಿತ ಮಟ್ಟದಲ್ಲಿರುವ ಬಗ್ಗೆ ಚರ್ಚಿಸಲಾಯಿತು. ದಿನಾಂಕ:21/12/2020 ರಂದು ಅಧೀಕ್ಷಕ ಅಭಿಯಂತರರು ಸಂಬಂಧಿಸಿದವರನ್ನು ಸಭೆಗೆ ಕರೆದು ಚರ್ಚಿಸಿ ಕ್ರಮವಹಿಸುವರೆಂದು ಸಂಬಂಧಿಸಿದವರು ತಿಳಿಸಿರುತ್ತಾರೆ.
- ದಿನಾಂಕ:14/12/2020ರಂದು ಐ.ಟಿ.ಐ ಯಿಂದ ಕೆ.ಆರ್.ಪುರದ ವರೆಗಿನ ಪಾದಾಚಾರಿ ರಸ್ತೆ ತೆರವುಗೊಳಿಸುವ ಕಾರ್ಯಚರಣೆಯನ್ನು ಮಾಡಲಾಗಿದೆಯೆಂದು ಸಭೆಗೆ ಅಭಿಯಂತರರು ತಿಳಿಸಿರುತ್ತಾರೆ.

Scanned by CamScanner

- ಇಂದಿನ ಸಭೆಗೆ ಬೆಸ್ಕಾಂ ಇಲಾಖೆಯವರು/ಅರಣ್ಯ ಇಲಾಖೆಯವರು ಭಾಗವಹಿಸಿರುವುದಿಲ್ಲ. ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಸೂಚಿಸಲು ತಿಳಿಸಲಾಯಿತು.

ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು, ವಾರ್ಡ್ ಸಂ–52

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ಉಪ ವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
4. ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ ನಿರ್ವಹಣೆ) ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
6. ಸಹಾಯಕ ಕಂದಾಯ ಅಧಿಕಾರಿ, ಕೆ.ಆರ್.ಪುರ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
7. ಆರಕ್ಷಕ ನಿರೀಕ್ಷಕರು, ಕೆ.ಆರ್.ಪುರ ಪೊಲೀಸ್ ಠಾಣೆ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
8. ಪಶು ಸಂಗೋಪನೆ ವೈದ್ಯಾಧಿಕಾರಿ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
9. ಕಛೇರಿ ಪ್ರತಿ

Scanned by CamScanner